## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ ಸಿ . ಸಂಖ್ಯೆ 390/2021

**ಸಾಕ್ಷಿಯನ್ನು ದಿಃ 24.01.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಚಾಯಾ | ಸಿ ಡಬ್ಲ್ಯೂಃ 3 | ಪಿಡಬ್ಲ್ಯೂಃ1 |
| ತಂದೆಯ ಹೆಸರು | ಅಶೋಕ | | |
| ವಯಸ್ಸು | 32 ವರ್ಷ | | |
| ಉದ್ಯೋಗ | ಅಂಗನವಾಡಿ ಶಿಕ್ಷಕಿ | | |
| ವಾಸಸ್ಥಳ | ತಿಪ್ಪಲಾಪುರ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಮ್ಮ. ಚಾಸಾ 1 ಮತ್ತು 2 ರವರು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಘಟನೆ ನಡೆದ ನಂತರ ನನಗೆ ನನ್ನ ತಮ್ಮ ಪ್ರೀತಿ ಮಾಡುತ್ತಿದ್ದ ಬಗ್ಗೆ ಗೊತ್ತಾಯಿತು. ನನ್ನ ತಮ್ಮ ಪ್ರೀತಿ ಮಾಡುತ್ತಿರುವ ಹುಡುಗಿ ನನ್ನ ತಮ್ಮನ ವಿರುದ್ಧ ದೂರು ಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿಲ್ಲ ಮತ್ತು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀಸವಾಲು ಸಸಅ ರವರಿಂದಃ-</u>**

ನಮ್ಮ ಸ್ವಂತ ಊರು ಸ್ಟೋರ್ ಬೀದಿ ಎಂದರೆ ಸರಿ. ನಮ್ಮ ಮನೆಯ ಹತ್ತಿರವಿದ್ದ ಚಾಸಾ 2 ರವರ ಮೊಮ್ಮಗಳಾದ ಚಾಸಾ 1 ರವರು ಮತ್ತು ನನ್ನ ತಮ್ಮನಾದ ಆರೋಪಿ ಕಳೆದ 4 ವರ್ಷಗಳ ಹಿಂದೆ ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಕಳೆದ 3 ವರ್ಷಗಳಿಂದ ನನ್ನ ತಮ್ಮ ಕುಡಿಯುವ ಚಟಕ್ಕೆ ಒಳಗಾಗಿ ಚಾಸಾ 1 ರವರ ಮೇಲೆ ಅನುಮಾನಪಟ್ಟು ಬೈಯ್ಯುವುದು, ಬೆದರಿಕೆ ಹಾಕುವುದು ಮಾಡುತ್ತಾ ಹಿಂಸೆ ಕೊಡುತ್ತಿದ್ದ ವಿಚಾರವನ್ನು ಚಾಸಾ 1 ಮತ್ತು 2 ರವರು ನನ್ನ ಬಳಿ ಹೇಳಿ ಆರೋಪಿಗೆ ಬುದ್ಧಿ ಹೇಳುವಂತೆ ನನಗೆ ಒಪ್ಪಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿಗೆ ಎಷ್ಟು ಬುದ್ಧಿ ಹೇಳಿದರು ಸಹ ಆತ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆಗು ಒಂದು ತಿಂಗಳಿಗೂ ಸಹ ಆರೋಪಿ ಚಾಸಾ 1 ರವರ ಜೊತೆ ಗಲಾಟೆ ಮಾಡಿದ್ದಕ್ಕೆ ಚಾಸಾ 1 ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆಗ ಆರೋಪಿಯು ಇನ್ನು ಮುಂದೆ ಚಾಸಾ 1 ರವರ ತಂಟೆಗೆ ಹೋಗುವುದಿಲ್ಲವೆಂದು ಹೇಳಿದ್ದಾ ಎಂದರೆ ಗೊತ್ತಿಲ್ಲ. ಒಂದು ವಾರ ಸುಮ್ಮನಿದ್ದು ನಂತರ ಅದೇ ರೀತಿ ಹಿಂಸೆ ನೀಡುತ್ತಾ ಪ್ರತಿದಿನ ಚಾಸಾ 1 ರವರನ್ನು ಹಿಂಭಾಲಿಸುತ್ತಾ ಬೆದರಿಕೆ ಹಾಕುತ್ತಿದ್ದ ಎಂದರೆ ಗೊತ್ತಿಲ್ಲ. ದಿನಾಂಕ 15.01.2021 ರಂದು ಸಂಜೆ 6.30 ಗಂಟೆಗೆ ಚಾಸಾ 1 ರವರು ಕೆಲಸಕ್ಕೆ ಹೋಗಿ ವಾಪಸ್ಸು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ನಗರಸಭೆ ಮುಂದಿನ ರಸ್ತೆಯಲ್ಲಿ ಆರೋಪಿ ಚಾಸಾ 1 ರವರನ್ನು ಅಡ್ಡ ಹಾಕಿ ಬೈದು ನೀನು ಸಾಯಿ ಎಂದು ಬೆದರಿಕೆ ಹಾಕಿ ಹಿಂಸೆ ನೀಡಿದ್ದಕ್ಕೆ ಚಾಸಾ 1 ಆರೋಪಿಯ ವಿರುದ್ಧ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆ ಸಂಬಂಧ ಪೋಲೀಸರು ಆರೋಪಿಯನ್ನು ಬಂಧಿಸಿದ್ದು ನಂತರ ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿ. ನಾನು ಘಟನೆಯ ಬಗ್ಗೆ ಮೇಲೆ ಹೇಳಿದಂತೆ ವಿವರವಾದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿ ನನ್ನ ಸ್ವಂತ ತಮ್ಮನಾದ ಕಾರಣ ಅವನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.